ಅಬಕಾರಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು.

960(1379) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಬಕಾರಿ ಇಲಾಖೆಯಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಉಪ-ನಿರೀಕ್ಷಕರ ಹುದ್ದೆಗಳು ಭಾರೀ ಪ್ರಮಾಣದಲ್ಲಿ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಇರುವಾಗ ಬಡ್ತಿಯನ್ನು ಮಾನದಂಡವಾಗಿ ಪರಿಗಣಿಸಲಾಗುವುದೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ಅಬಕಾರಿ ನಿರೀಕ್ಷಕರ 17 ಹುದ್ದೆಗಳು ಖಾಲಿ ಇರುತ್ತದೆ.

ಅಬಕಾರಿ ಉಪ-ನಿರೀಕ್ಷಕರುಗಳ 319 ಹುದ್ದೆಗಳು ಖಾಲಿ ಇರುತ್ತವೆ.

ಆ) ಅಬಕಾರಿ ನಿರೀಕ್ಷಕರ ಹುದ್ದೆಗಳನ್ನು ಪದೋನ್ನತಿ ಪುನರ್ ಪರಿಶೀಲಿಸಿ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಖಾಲಿ ಇರುವ 319 ಅಬಕಾರಿ ಉಪ-ನಿರೀಕ್ಷಕರ ಪೈಕಿ 100 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಿದೆ. ಅಲ್ಲದೆ ನಿಯಮಾನುಸಾರ ಮುಂಬಡ್ತಿ ಮೂಲಕ ಹುದ್ದೆಗಳನ್ನು ತುಂಬಲು ಪರಿಶೀಲನೆಯಲ್ಲಿದೆ.

ಇ) ಇಲಾಖಾ ವಿಚಾರಣೆ ಬಾಕಿ ಇರುವ ಪ್ರಕರಣಗಳಲ್ಲಿ ಅಂತಿಮ ತೀರ್ಮಾನ ಹೊರಡಿಸುವವರೆಗೆ ಬಡ್ತಿಗೆ ಪರಿಗಣಿಸಲಾಗುವುದಿಲ್ಲ.

ಮದ್ಯ ಮಾರಾಟ ಲೈಸೆನ್ಸ್ ವಿವರಗಳು.

961(1380) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ, 1998-99ನೇ ಸಾಲಿನಲ್ಲಿ ಯಾವ ಯಾವ ಮದ್ಯ ಮಾರಾಟದ ಸನ್ನದು ಮಂಜೂರು ಮಾಡಲಾಗಿದೆ ಅವುಗಳ ಸಂಖ್ಯೆ ಎಷ್ಟು? (ಮದ್ಯವಾರು ವಿವರ ಒದಗಿಸುವುದು.

ಅ) ಸಾರಾಯಿಯನ್ನು ಬಾಟ್ಲಿಂಗ್ ಮುಖಾಂತರ ಮಾರಾಟ ಮಾಡುವ ವ್ಯವಸ್ಥೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಖಾಸಗಿಯವರಿಗೂ ಸಹ ಅನುಮತಿ ನೀಡಲಾಗುವುದೇ?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

ಅ) ರಾಜ್ಯದಲ್ಲಿ 1998-99ನೇ ಸಾಲಿಗೆ ಈ ಕೆಳಗಿನಂತೆ ಮದ್ಯದಂಗಡಿ ಸನ್ನದುಗಳನ್ನು ನೀಡಲಾಗಿದೆ.

ಸಿಎಲ್ - 1	(ಸಗಟು)	-	339
ಸಿಎಲ್ - 2	(ಟಿಲ್ಲರಿ)	-	3797
ಸಿಎಲ್ - 1	(ಕ್ಲಬ್‌ಗಳು)	-	137
ಸಿಎಲ್ - 7	(ಹೋಟೇಲ್ ಮತ್ತು	-	339
	ಬೋರ್ಡಿಂಗ್ ಹೌಸ್)	-	115
ಸಿಎಲ್ - 8	(ಮಿಲಿಟರಿ ಕ್ಯಾಂಟೀನ್)	-	48
ಸಿಎಲ್ - 9	(ಬಾರ್‌ಗಳು)	-	3348

ಮೇಲ್ಕಂಡ ಸನ್ನದು ಪೈಕಿ 1998-99ನೇ ಸಾಲಿನಲ್ಲಿ ನೀಡಲಾದ ಹೊಸ ಸನ್ನದುಗಳ ಸಂಖ್ಯೆ ಎಂದರೆ ಸಿಎಲ್ - 1=1, ಸಿಎಲ್ - 2=1, ಸಿಎಲ್ - 4=3, ಸಿಎಲ್ - 7=13 ಮತ್ತು ಸಿಎಲ್ - 9=53. ಉಳಿದವು 1998-99ಕ್ಕೆ ಮುಂಚೆ ಇದ್ದ ಸನ್ನದುಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಮುಧೋಳದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಕೆಯಲ್ಲಿ ವಿಳಂಬ.

964 (1360) ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮುಧೋಳ ಸ್ಟೇಷನ್‌ಗೆ 20 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್ ಪೂರೈಕೆಯಾಗಿದ್ದರೂ ಸಹ ಅದನ್ನು ಅಳವಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದಲ್ಲಿ ಅದಕ್ಕೆ ಕಾರಣವೇನು ಹಾಗೂ ಎಂದು ಅಳವಡಿಸಲಾಗುವುದು?